ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/03/ಇಸಿಎಸ್(1)/2025

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com

ದಿನಾಂಕ: 05.05.2025

## ಜ್ಞಾಪನ

ವಿಷಯ: ಏಪ್ರಿಲ್/ಮೇ 2025 ರ ಡಿಪ್ಲೋಮ ಸೆಮಿಸ್ಟರ್ C-03, C- 09, C-15& C-20 ಪಠ್ಯಕ್ರಮಗಳ ಥಿಯರಿ ಪರೀಕ್ಷೆಗಳಲ್ಲಿ ವೀಕ್ಷಕರು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು.

ಉಲ್ಲೇಖ:1.ಈ ಕಛೇರಿ ಸುತ್ತೋಲೆ ಬಿಟಿಇ/೦3/ಇಸಿಎಸ್(1)/2025 ದಿನಾಂಕ: 22.04.2025
2.ಈ ಕಛೇರಿ ಜ್ಞಾಪನ ಬಿಟಿಇ/೦3/ಇಸಿಎಸ್(1)/2025 ದಿನಾಂಕ: 23.04.2025
3.ಈ ಕಛೇರಿ ಜ್ಞಾಪನ ಬಿಟಿಇ/೦3/ಇಸಿಎಸ್(1)/2025 ದಿನಾಂಕ: 28.04.2025
4. ಸರ್ಕಾರಿ ಆದೇಶ ಸಂಖ್ಯೆ: ಇಡಿ /52/ಟಿಪಿಇ/2010 ದಿನಾಂಕ:17.04.2025

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಸುತ್ತೋಲೆಯಲ್ಲಿ ಪರೀಕ್ಷಾ ಕೇಂದ್ರಗಳಲ್ಲಿನ ಮುಖ್ಯ ಅಧೀಕ್ಷಕರುಗಳು, ಮುಖ್ಯ ವೀಕ್ಷಕರು, ಉಪ ಮುಖ್ಯ ಅಧೀಕ್ಷಕರು, ಆಂತರಿಕ ಅಂಕಗಳ ಪರಿವೀಕ್ಷಕರು (ಪದ ನಿಮಿತ್ತ ವಿಚಕ್ಷಣಾಧಿಕಾರಿ) ನಿರ್ವಹಿಸಬೇಕಾದ ಕರ್ತವ್ಯಗಳನ್ನು ವಿವರವಾಗಿ ನೀಡಲಾಗಿತ್ತು.

ಮುಂದುವರೆದು ಉಲ್ಲೇಖ (2) & (3) ರ ಜ್ಞಾಪನಗಳಲ್ಲಿ ATS Sheet ಗಳನ್ನು ಪ್ರತಿ ಪರೀಕ್ಷಾ ದಿನದ ಹಿಂದಿನ ದಿನವೇ ATS Sheet ಗಳನ್ನು ಮುದ್ರಿಸಿಟ್ಟುಕೊಂಡು, ಪರೀಕ್ಷಾ ದಿನದಂದು ಬಿಟಿಇ ಲಿಂಕ್ಸ್ ಪೋರ್ಟಲ್ ನಲ್ಲಿ ನಿಗದಿತ ಸಮಯದಲ್ಲಿ ಸುಸೂತ್ರವಾಗಿ ಪ್ರಶ್ನೆ ಪತ್ರಿಕೆಯನ್ನು ಮುದ್ರಿಸಲು ಕ್ರಮಕೈಗೊಳ್ಳುವಂತೆ ಮತ್ತು ಪರೀಕ್ಷಾ ಕೇಂದ್ರಗಳ /ಜೋಡಣೆಗೊಂಡ ಪಾಲಿಟೆಕ್ನಿಕ್ ಗಳ ಪ್ರಿನ್ಸಿಪಾಲರುಗಳು ಕಡ್ಡಾಯವಾಗಿ ಪ್ರತಿದಿನ ಪರೀಕ್ಷೆ ಪ್ರಾರಂಭವಾಗುವ ಪ್ರತಿ ಸೆಷನ್ ಗಳ 01 ಗಂಟೆ ಮುಂಚಿತವಾಗಿ "BTELinx User Forum" telegram group ನಲ್ಲಿ VC ಗೆ ತಪ್ಪದೇ ಸೇರ್ಪಡೆಗೊಂಡು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಅನುಸರಿಸಿ ಪರೀಕ್ಷೆಗಳನ್ನು ಸಮರ್ಪಕವಾಗಿ ನಡೆಸಲು ಕ್ರಮಕೈಗೊಳ್ಳುವಂತೆ ತಿಳಿಸಲಾಗಿತ್ತು.

ಆದಾಗ್ಯೂ ಕೆಲವೊಂದು ಪರೀಕ್ಷಾ ಕೇಂದ್ರಗಳ ಪ್ರಿನ್ಸಿಪಾಲರುಗಳು "BTELinx User Forum" telegram group ನ VC ಯಲ್ಲಿ ಪಾಲ್ಗೊಳ್ಳದಿರುವುದು ಮತ್ತು ಜೋಡಣೆಗೊಂಡ ಸಂಸ್ಥೆಗಳ ಪ್ರಿನ್ಸಿಪಾಲರುಗಳು/ ಸಂಸ್ಥೆಯ ಜವಾಬ್ದಾರಿಯುತ ಸಿಬ್ಬಂದಿ ಪರೀಕ್ಷಾ ಕೇಂದ್ರದಲ್ಲಿ ಹಿಂದಿನ ದಿನ ಹಾಜರಾಗಿ ಮುದ್ರಿತಗೊಂಡ ATS Sheet ಗಳಲ್ಲಿ ತಮ್ಮ ಸಂಸ್ಥೆಯ ವಿದ್ಯಾರ್ಥಿಗಳು ಸೇರ್ಪಡೆಯಾಗಿರುವುದನ್ನು ಖಾತರಿಪಡಿಸಿಕೊಳ್ಳದೇ ಇರುವ ಕಾರಣ ನೋಂದಣೆಯಾಗಿರುವ ವಿದ್ಯಾರ್ಥಿಗಳಿಗೆ ಪ್ರಶ್ನೆಪತ್ರಿಕೆಯನ್ನು Online ನಲ್ಲಿ ನಿಗದಿತ ಸಮಯದಲ್ಲಿ ಮುದ್ರಿಸಲು ತೊಂದರೆಯಾಗಿರುತ್ತದೆ. ಮುಂದಿನ ಪರೀಕ್ಷಾ ದಿನಗಳಲ್ಲಿ ಇಂತಹ ಲೋಪ/ಗೊಂದಲಗಳು ಉಂಟಾದಲ್ಲಿ ಸಂಬಂಧಪಟ್ಟ ಪ್ರಿನ್ಸಿಪಾಲರುಗಳ ಮೇಲೆ ಉಲ್ಲೇಖ (4) ಸರ್ಕಾರದ ಆದೇಶದನ್ವಯ ಕ್ರಮ ಕೈಗೊಳ್ಳಲಾಗುವುದು ಹಾಗೂ ಈ ಸಂಬಂಧ ಪರೀಕ್ಷಾ ಕೇಂದ್ರಗಳ ಮುಖ್ಯ ವೀಕ್ಷಕರುಗಳು ದಿನಂಪ್ರತಿ ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ ಇವರಿಗೆ ವರದಿ ನೀಡಲು ಸೂಚಿಸಲಾಗಿದೆ.

ಮುಂದುವರೆದು ಥಿಯರಿ ಪರೀಕ್ಷೆಗಳಿಲ್ಲದ ದಿನಗಳಲ್ಲಿ ಬಾಹ್ಯ ಸಂಸ್ಥೆಗಳಿಂದ ನಿಯೋಜನೆಗೊಂಡ ವೀಕ್ಷಕರುಗಳು/ ಮುಖ್ಯ ಅಧೀಕ್ಷಕರುಗಳು ತಮ್ಮ ಮಾತೃ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸತಕ್ಕದ್ದು. ಈ ಸಂಬಂಧ ಪರೀಕ್ಷಾ ಕೇಂದ್ರಗಳ ಪ್ರಿನ್ಸಿಪಾಲರುಗಳು ಕಾರ್ಯದರ್ಶಿ ತಾಂತ್ರಿಕ ಪರೀಕ್ಷಾ ಮಂಡಳಿ ಇವರಿಗೆ ವರದಿ ನೀಡಲು ಸೂಚಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ ,

1. ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು ,ಪ್ರಶ್ನೆ ಪತ್ರಿಕೆ ಭದ್ರತಾ ಅಧಿಕಾರಿಗಳು ಹಾಗೂ ಮುಖ್ಯ ವೀಕ್ಷಕರುಗಳು – ಅಗತ್ಯ ಕ್ರಮಕ್ಕಾಗಿ
2. ಎಲ್ಲಾ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳು- ಮುಂದಿನ ಕ್ರಮಕ್ಕಾಗಿ

ಪ್ರತಿ:

1. ಶ್ರೀ ಹರೀಶ ಶೆಟ್ಟಿ, ಪ್ರಿನ್ಸಿಪಾಲರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್ – ಮಾಹಿತಿಗಾಗಿ
2. ಇ-ಗವರ್ನೆನ್ಸ್ – ವೆಬ್ ಸೈಟ್ ನಲ್ಲಿ ಪ್ರಕಟಿಸಲು
3. ಗಣಕ ಕೇಂದ್ರ- ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು
4. ನಿರ್ದೇಶಕರ ಆಪ್ತಶಾಖೆ .